ಎತ್ತಿಸಿಕೊಂಡಿದ್ದನ್ನು ಅಧ್ಯಯನ ಕೇಂದ್ರದ ಗೋಡೆಗಳೂ ಪಿಸುಗುಟ್ಟಿ ಸುಮ್ಮನಾಗಿದ್ದವು. ಎಲ್ಲರಂತೆ ಬಸ್ಸಿನಲ್ಲಿ ಬರದೆ ದಿನವೂ ಕೆಂಪು ಮಾರುತಿ 800 ಕಾರಿನಲ್ಲಿ ತಾನೆ ಡ್ರೈವ್ ಮಾಡಿಕೊಂಡು ಬರುತ್ತಾಳೆ. ಕ್ಯಾಂಟೀನ್, ಲೈಬ್ರರಿ ಕಡೆ ಯಾವತ್ತೂ ಸುಳಿಯುವುದಿಲ್ಲ. ಅಂಥ ಅನೂಹ್ಯ ಇಂದು ಫೋನ್ ಮಾಡಿ ಅಭಿನಂದನೆಗಳನ್ನು ತಿಳಿಸಿದ್ದಳು. ಬ್ರೆಕ್ಟ್ ಮುಖ ತೊಳೆದುಕೊಂಡು, ಬಟ್ಟೆ ಬದಲಿಸಿಕೊಂಡು ಅಡ್ಮಿನಿಸ್ಟ್ರೇಟಿವ್ ಬಿಲ್ಡಿಂಗ್ ಕಡೆ ನಡೆದ. ಗಾಂಧಿ ಭವನ ರಸ್ತೆಯಲ್ಲಿದ್ದ ಕ್ಯಾಂಟೀನಿನಲ್ಲಿ ಒಂದು ತಟ್ಟೆ ಇಡ್ಲಿ ತಿಂದು ಕಾಫಿ ಕುಡಿಯುತ್ತಾ ದಿನಪತ್ರಿಕೆಯನ್ನು ತಿರುವಿ ಹಾಕಿದ. ರಾಜಕೀಯ ಅಸ್ಥಿರತೆ, ಪ್ರವಾಹಗಳ ಸುದ್ದಿಗಳೊಂದಿಗೆ ಮೂರನೇ ಪುಟದಲ್ಲಿ ಕಥಾಸ್ಪರ್ಧೆಯ ಫಲಿತಾಂಶ ಪ್ರಕಟವಾಗಿತ್ತು. ಬಹುಮಾನ ಗೆದ್ದವರ ಹೆಸರಿನ ಜೊತೆ ಫೋಟೊಗಳನ್ನೂ ಪ್ರಕಟಿಸಲಾಗಿತ್ತು. ಅಂತೆಯೇ ಅವನದೂ ಪ್ರಕಟವಾಗಿತ್ತು. ಆದರೆ ಫೋಟೊ ಅಷ್ಟು ಸ್ಪಷ್ಟವಾಗಿರಲಿಲ್ಲ. ಕತೆ ಕಳಿಸುವಾಗ ಕಾಟಾಚಾರಕ್ಕೆಂಬಂತೆ ಯಾವೊತ್ತೋ ತೆಗೆಸಿದ್ದ ಫೋಟೊವನ್ನು ಕಳುಹಿಸಿದ್ದೇ ಅದಕ್ಕೆ ಕಾರಣವಾಗಿತ್ತು. ಆದರೂ ಬ್ರೆಕ್ಟನ ಮನಸ್ಸು ಹಿರಿಹಿರಿ ಹಿಗ್ಗಿತ್ತು. ಬಸ್ಸಿನಲ್ಲಿ ಸಿಟಿಗೋ ಇಲ್ಲ ಕೆಂಗೇರಿಗೋ ಹೋಗಿ ವಿಶೇಷಾಂಕ ಕೊಂಡು ತಂದರಾಯಿತೆಂದು ಹಾಸ್ಟೆಲ್ ಕಡೆ ನಡೆದ. ಕ್ಲಾಸ್‌ಮೇಟ್ ಸಿದ್ಧಾರ್ಥ ಎದುರಾದ. ''ಕಂಗ್ರಾಟ್ಸ್ ಬ್ರದರ್. ಒಳ್ಳೆ ಸುದ್ದಿ ಕೇಳ್ದೆ. ಅನೂಹ್ಯ ಬೆಳಗ್ಗೇನೆ ಫೋನ್ ಮಾಡಿ ನಿನ್ನ ನಂಬರ್ ಕೇಳಿದ್ಲು. ಕತೆ ಕವನ ಅಂದ್ರೆ ಪ್ರಾಣ ಬಿಡ್ತಾಳೆ. ಫೋನ್ ಮಾಡಿದ್ಲಾ. ಅಂತೂ ಅವಳ ಕಣ್ಣು ನಿನ್ನ ಮೇಲೆ ಬಿದ್ದಂಗಾಯ್ತು. ಯೂ ಆರ್ ಲಕ್ಕಿ'' ಎಂದು ಕೈ ಕುಲುಕಿ ಮುಂದೆ ನಡೆದಿದ್ದ. ''ಥ್ಯಾಂಕ್ಯೂ ಬ್ರದರ್'' ಎಂದು ಬ್ರೆಕ್ಟನೂ ಹಾಸ್ಟೆಲ್ ಕಡೆ ನಡೆದ. ಅವನ ನಡಿಗೆಯಲ್ಲಿ ಎಂಥದ್ದೋ ಉತ್ಸಾಹ ಮತ್ತು ಸಡಗರ ತುಂಬಿ ತುಳುಕುತ್ತಿತ್ತು.

ಸಹೃದಯ ಓದುಗರೇ, ಬ್ರೆಕ್ಟನ ಕತೆಯನ್ನು ಮುಂದುವರೆಸುವ ಮೊದಲು ಅವನ ಪೂರ್ವಾಶ್ರಮದ ಬಗ್ಗೆ ಕತೆಯ ರೂಪದಲ್ಲಿಯೇ ಪರಿಚಯ ಮಾಡದೇ ಹೋದರೆ ನಿಮ್ಮಲ್ಲಿ ಒಂದಿಷ್ಟು ಗೊಂದಲಗಳು ಮೂಡಬಹುದೆಂಬ ಗುಮಾನಿ ಕತೆಗಾರನಾದ ನನಗೆ. ಕತೆಗಳು ಯಾವಾಗಲು ಸರಳವಾಗಿಯೂ, ಸುಲಲಿತವಾಗಿಯೂ ಓದಿಸಿಕೊಂಡು ಹೋಗಬೇಕೆಂಬುದರಲ್ಲಿ ನಂಬಿಕೆ ಇಟ್ಟವನು ನಾನು. ಬೆಂಗಳೂರಿನಿಂದ ಸುಮಾರು ನೂರೈವತ್ತು ಕಿಲೋಮೀಟರ್ ದೂರವಿರುವ ದ್ವಾರನಕುಂಟೆಯ ಚಿಕ್ಕಮಾರಯ್ಯನ ಮಗ ಭರಮಣ್ಣನೇ ನಮ್ಮ ಬ್ರೆಕ್ಟ್! ಚಿಕ್ಕಮಾರಯ್ಯ ಇಡೀ ದಲಿತ ಕೇರಿಯಲ್ಲಿ ಒಂದಿಷ್ಟು ಬುದ್ಧಿವಂತನಾಗಿದ್ದ. ಸುತ್ತ ಮುತ್ತಲಿಗೆ ನಡೆಯುತ್ತಿದ್ದ ಸಂತೆ, ಜಾತ್ರೆಗಳಲ್ಲಿ ದನಗಳನ್ನು ಖರೀದಿಸಿ ಕೊಡುವ, ಮಾರಿ ಕೊಡುವ ದಲ್ಲಾಳಿ ಕೆಲಸ ಮಾಡುತ್ತಿದ್ದ. ವಾರಕ್ಕೆರಡು ಸಂತೆಗಳಲ್ಲಿ ದಲ್ಲಾಳಿ ಕೆಲಸ ಮಾಡಿ ಸಾವಿರ ರೂಪಾಯಿ ಮೇಲಾದರೂ ಸಂಪಾದಿಸುತ್ತಿದ್ದ. ಜೊತೆಗೆ ಸದಾ ಹಾಲು ಕರೆಯುವ ಒಂದು ಎಮ್ಮೆಯನ್ನೂ ಮನೆಯಲ್ಲಿ ಕಟ್ಟಿರುತ್ತಿದ್ದ. ಹಾಗಾಗಿ ಮನೆಯಲ್ಲಿ ಕಾಸು ಸದಾ ಓಡಾಡುತ್ತಿತ್ತು. ಅದರಿಂದಾಗಿ ಪ್ರೈಮರಿ ಸ್ಕೂಲಿನಿಂದಲೂ ಮಗ ಭರಮಣ್ಣನನ್ನು ಯಾವುದೇ ತೊಂದರೆ ಇಲ್ಲದೆ ಓದಿಸುತ್ತಿದ್ದ. ಭರಮಣ್ಣ ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿ ತುಮಕೂರಿನಲ್ಲಿ ಪಿಯುಸಿ ಕೂಡ ಮುಗಿಸಿದ. ತುಮಕೂರಿನ ಜನರಲ್ ಹಾಸ್ಟೆಲಿನಲ್ಲಿ ಓದುತ್ತಿರುವಾಗ ಕಾಲೇಜಿನ ಚಟುವಟಿಕೆಗಳಲ್ಲಿ, ದಲಿತ ಸಂಘರ್ಷ ಸಮಿತಿಗಳು ಆಯೋಜಿಸುತ್ತಿದ್ದ ಹೋರಾಟ, ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ. ಭರಮಣ್ಣ ಚೆನ್ನಾಗಿ ಬರೆಯುತ್ತಿದ್ದನಾದರೂ ಮಾತನಾಡುತ್ತಿದ್ದದ್ದು ಮಾತ್ರ ತುಂಬಾ ಕಡಿಮೆ. ಗಾಂಧಿ, ಬುದ್ಧ, ಬಸವ, ಅಂಬೇಡ್ಕರರ ವಿಚಾರಗಳನ್ನು ಚೆನ್ನಾಗಿ ಓದಿಕೊಳ್ಳತೊಡಗಿದ್ದರಿಂದಾಗಿ ಅವನಲ್ಲಿ ಹಳ್ಳಿಗಾಡಿನ ಬಡವರ ಬಗ್ಗೆ ಹೆಚ್ಚಿನ ಕಳಕಳಿ ಹುಟ್ಟಿಕೊಂಡಿತ್ತು. ಹಾಗಾಗಿ ಪಿಯುಸಿಯಲ್ಲಿರುವಾಗಲೇ ಸಣ್ಣ ಪುಟ್ಟ ಕವಿತೆ, ಲೇಖನಗಳನ್ನು ಬರೆದು ಸ್ನೇಹಿತರ, ಉಪನ್ಯಾಸಕರ ಮೆಚ್ಚುಗೆಯನ್ನೂ ಗಳಿಸಿದ್ದ.